ಮುರಾರ್ಜಿ ವಸತಿ ಶಾಲೆಗಳು ಹಾಗೂ ಕಟ್ಟಡಗಳ ನಿರ್ಮಾಣ

883 (815) ಶ್ರೀ ಪಾಟೀಲ್ ಎಂ.ಬಿ. (ಬಬಲೇಶ್ವರ) : ಮಾನ್ಯ ಸಮಾಜ ಕಲ್ಯಾಣ ಹಾಗೂ ಬಂಧಿಖಾನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿಜಾಪುರ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮುರಾರ್ಜಿ ದೇಸಾಯಿ ವಸತಿ ಶಾಲೆಗಳು ಎಷ್ಟು;

ಆ) ಬಾಡಿಗೆ ಹಾಗೂ ಹೊಸ ಕಟ್ಟಡಗಳಲ್ಲಿ ಎಷ್ಟು ಶಾಲೆಗಳು ಕಾರ್ಯ ನಿರ್ವಹಿಸುತ್ತಿವೆ;

ಇ) ಮುಗಿಯುವ ಹಂತದಲ್ಲಿರುವ ಹೊಸ ಕಟ್ಟಡ ಕಾಮಗಾರಿಗಳು ಎಷ್ಟು;

ಈ) ಸದರಿ ಶಾಲೆಗಳ ವಸತಿ ನಿಲಯಗಳಿಗೆ ಕಳಪೆ ಮಟ್ಟದ ಸಾಮಗ್ರಿಗಳನ್ನು ಸರಬರಾಜು ಮಾಡುತ್ತಿರುವ ಬಗ್ಗೆ ಸರಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎ. ನಾರಾಯಣ ಸ್ವಾಮಿ (ಮಾನ್ಯ ಸಮಾಜ ಕಲ್ಯಾಣ ಹಾಗೂ ಬಂದೀಖಾನೆ ಸಚಿವರು) :

ಅ) 12.

ಆ)

1. ಸ್ವಂತ ಕಟ್ಟಡಲ್ಲಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆ – 06
2. ಬಾಡಿಗೆ ಕಟ್ಟಡದಲ್ಲಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆ – 06

ಇ) ಬಿಜಾಪುರ ಜಿಲ್ಲೆಯಲ್ಲಿ ಪ್ರಸ್ತುತ ಈ ಕೆಳಕಂಡ ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ.

1. ಮೊದೇವಶಾಲೆ ತಿಕೋಟ, ಬಿಜಾಪುರ ತಾ॥
2. ಮೊದೇವಶಾಲೆ ಬಸವನಬಾಗೇವಾಡಿ.
3. ಮೊದೇವಶಾಲೆ ಗುಬ್ಬೆವಾಡ, ಸಿಂದಗಿ ತಾ॥
4. ಮೊದೇವಶಾಲೆ ಬಂಥನಾಳ, ಇಂಡಿ ತಾ॥ (ಬಾಗಶಃ ಕಟ್ಟಡ)

ಈ) ಯಾವುದೂ ಇಲ್ಲ.